ಅದೇ ಸಾಲಿನ ಕೊನೆಯ ಕುರ್ಚಿಯಲ್ಲಿ ತರುಣಿಯೊಬ್ಬಳು ಇಯರ್ ಫೋನ್ ಹಾಕ್ಕೊಂಡು ಯಾರೊಂದಿಗೋ ಮಾತನಾಡುತ್ತ, ಮುಸಿಮುಸಿ ನಗ್ತಿದ್ದಾಳೆ. ಯಾವುದೊ ಜೋಕ್ ಎಂಜಾಯ್ ಮಾಡ್ತಿರಬಹುದು, ಬಾಯ್ ಫ್ರೆಂಡ್ ಜೊತೆ?

'ಅಲ್ಲಲ್ಲ...' ನಗುವಿನ ಎಮೋಜಿ.

ನಾನು ಕುಳಿತಿದ್ದು ವೇದಿಕೆಯ ಎಡಬದಿಗೆ... ಅಂದರೆ, ಬಲಬದಿಯಲ್ಲಿ, ನಾಲ್ಕನೇ ಸಾಲು?...

ನೋಟ ಅತ್ತ ತಿರುಗಿಸಿದೆ... ಇರುವ ಎಂಟು ಕುರ್ಚಿಗಳಲ್ಲಿ ಆರು ಭರ್ತಿಯಾಗಿವೆ. ಹೀಗೆ ತುಂಟ ಸಂದೇಶ ಕಳುಹಿಸುವ ಮುಖ ಯಾವುದೂ ಕಾಣಲಿಲ್ಲ.

'ಬಹಳ ಜನ ನನ್ನನ್ನು ಎಲ್.ಬಿ.ಎಚ್ ಅಂತಲೇ ಗುರುತಿಸುತ್ತಿದ್ದದ್ದು, ಐ ಬೆಟ್, ನಿಮ್ಮಂಥವರಿಗೆ ನೆನಪಿರಲಾರದು' ಎಂಬ ಚಾಲೆಂಜ್.

ನಾನು ಮತ್ತೆ ಸೋತಿದ್ದೆ.

'ದುಬೆ, ತುಂಬಾ ಹೊತ್ತಾಯ್ತಾ ಬಂದು?' ಫಣಿಯ ದನಿಗೆ ಮೊಬೈಲಿಂದ ತಲೆ ಎತ್ತಿದೆ.

'ಹೂಂ, ಅರ್ಧಗಂಟೆ ಆಗಿರಬಹುದು ನಮ್ಮವರ್‍ಯಾರೂ ಕಾಣಲಿಲ್ಲ, ನಾನೂ ನೋಡ್ತಾನೆ ಇದ್ದೀನಿ, ಸದ್ಯ ನೀನಾದ್ರೂ ಬಂದ್ಯಲ್ಲ' ಎಂದೆ.

'ವರ್ಕಿಂಗ್ ಡೇ ಆಯ್ತಲ್ಲ, ನಮ್ಮ ಅಕ್ಚುವಲ್ ಪ್ರೋಗ್ರಾಮ್ ಇರೋದು ನಾಡಿದ್ದು. ಇವತ್ತು ಬರೋವ್ರು ತೀರಾ ಆತ್ಮೀಯರು ಮತ್ತು ನಿನ್ನಂತಹ ವಿಶೇಷ ಅತಿಥಿ, ದೂರದಿಂದ ಬಂದಿರೋವ್ರು' ನಕ್ಕ.

ನಮ್ಮ ಶಾಲಾ ಬಳಗದ ಉದಯನಿಗೆ 40 ವಸಂತಗಳನ್ನು ಕಂಡ ಸಂಭ್ರಮ. ಅದೊಂದು ನೆಪವಷ್ಟೇ. ನಾವೆಲ್ಲ ಗೆಳೆಯರು ಸೇರಬೇಕು ಅನ್ನುವ ಸಮಯಕ್ಕೆ ಇವನ ಹುಟ್ಟುಹಬ್ಬ. ವಾಟ್ಸ್‌ಆ್ಯಪ್ ಬಳಗದಲ್ಲಿ 50ಕ್ಕೂ ಮಿಗಿಲಾಗಿ ಸದಸ್ಯರಿದ್ದರೂ ಸಕ್ರಿಯರಾಗಿದ್ದವರು ಕಡಿಮೆಯೇ. ಕೆಲವರನ್ನು ಕಂಡೂ ಇಲ್ಲ, ಡಿ.ಪಿ.ಗಳಲ್ಲಿ ತಮ್ಮ ಹೊರತಾಗಿ ಬೇರೆ ಚಿತ್ರಗಳನ್ನಿಟ್ಟಾಗ ಆ ಸದಸ್ಯರ ಮುಖವೂ ನೆನಪಾಗುವ ಸಾಧ್ಯತೆ ಇಲ್ಲ.

'ಓಹ್, ನಮ್ ಸುಂದರಿ ಇಲ್ಲೇ ಇದ್ದಾಳೆ? ಯಾವಾಗ್ ಬರೋಣಾವಾಯ್ತೋ ಅಮ್ಮೋವ್ರು? ಇಲ್ಲೂ ಹಿಂದುಗಡೆ ಸಾಲುಗಳಲ್ಲೇ ಇದ್ದೀಯ?...' ಎನ್ನುತ್ತಾ ಕೀಟಲೆ ಮಾಡುತ್ತಲೇ ಹಿಂದಕ್ಕೆ ನಡೆದ. ನಾನು ಅವನ ಹಿಂದೆ... 'ಹೌದು, ಇದರಲ್ಲೇ ಮಜಾ ಇರೋದು, ಕೊನೆಯಿಂದ ನಾಲ್ಕನೇ ಸಾಲು' ಎಂದು ಅವಳು ನನ್ನತ್ತ ನೋಡಿದಾಗ ಶಾಕ್ ತಿಂದ ಅನುಭವ.

'ಇವಳು ಸೃಜನಾ, ನಮ್ಮ ಕ್ಲಾಸ್‌ನಲ್ಲೇ ಇದ್ಳು, ಲಾಸ್ಟ್ ಬೆಂಚ್ ಹುಡುಗಿ ಅಂತ ತರಲೆ ಮಾಡ್ತಿದ್ವಿ.'

ಎಲ್.ಬಿ.ಎಚ್... ಅರ್ಥವಾಗಿತ್ತು. 'ಸಾರಿ ಗುರುತು ಸಿಗಲಿಲ್ಲ' ಪೆಚ್ಚು ನಗೆ ನಕ್ಕೆ. 'ಇವನು ಗೊತ್ತಲ್ಲ, ಅನುಪಮ್ ದುಬೆ.'

'ಎಲ್ಲರಿಗೂ ಪಿ.ಎಂ. ಗೊತ್ತು, ಆದರೆ ಪಿ.ಎಂ.ಗೆ ಎಲ್ಲರ ಪರಿಚಯವಿರದಲ್ಲ?' ಗುಳಿಬಿದ್ದ ಕೆನ್ನೆಯಲ್ಲಿ ಇನ್ನಷ್ಟು ಚೆಲುವು. ನಾನು ಮತ್ತೆ ಕೆಂಪಾಗಿದ್ದೆ. ಮೂವರೂ ಒಂದೇ ಕಡೆ ಕುಳಿತಾಯಿತು. ಅವರಿಬ್ಬರೂ ಏನೇನೋ ಮಾತನಾಡುತ್ತಿದ್ದರು. ನನಗೇನೂ ಅರ್ಥವಾಗಿರಲಿಲ್ಲ – ನನ್ನ ದೃಷ್ಟಿಯೆಲ್ಲ ಅವಳ ಮೇಲೆ! ಶಾಲೆಯಲ್ಲಿ ಎಲ್ಲದರಲ್ಲೂ ಮುಂಚೂಣಿಯಲ್ಲಿದ್ದ ನನಗೆ ಯಾರೂ ಕಾಣುತ್ತಿರಲಿಲ್ಲ, ಒಂದು ರೀತಿ ಅಂತರ್ಮುಖಿ, ಹೆಚ್ಚು ಬೆರೆಯುತ್ತಿರಲಿಲ್ಲ. ಹೊರಾಂಗಣ ಆಟಗಳು ಅಷ್ಟು ಸೆಳೆದಿರಲಿಲ್ಲ, ಚದುರಂಗವನ್ನು ಆಡುತ್ತಿದ್ದೆ. ಅಲ್ಲೂ ಎದುರಾಳಿಯನ್ನು ಸೋಲಿಸುವುದೇ ಗುರಿ. 'ಅಯ್ಯೋ, ನೀನು ಇರೋದನ್ನೇ ಮರೆತು ಹರಟುತ್ತಾ ಇದ್ದೀವಿ. ಸೃಜಿ, ನನ್ನ ಕಸಿನ್‌ನೇ ಮದುವೆಯಾಗಿರೋದು, ನನಗೆ ಅತ್ತಿಗೆ ವರಸೆ, ನಾನು ಮಾತ್ರ ಸೃಜಿ ಅಂತಲೇ ಕರೆಯೋದು, ಒಟ್ಟಿಗೆ ಕಲಿತೋವ್ರು ಅನ್ನೋ ಸಲುಗೆ...' ನಾನು ಸುಮ್ಮನೆ ನಕ್ಕೆ. ಅಗಲ ಹೇರ್‌ಕ್ಲಿಪ್‌ನಿಂದ ದಟ್ಟವಾಗಿದ್ದ ಕೂದಲನ್ನು ಬಿಗಿದಿದ್ದಳು. ಎರಡೂ